**ದಿನಾಂಕಃ 02.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ ಶ್ರೀ. ಬಿ.ಎಮ್.ಎನ್ ವಕೀಲರಿಂದಃ**

ಕರಿಬಸವೇಗೌಡ ಮತ್ತು ಮಾದೇಗೌಡ ಅಲಿಯಾಸ್ ಕುಳ್ಳೇಗೌಡ ರವರು ಸಹೋದರರು ಎಂದರೆ ಸರಿ. ಸದರಿ ಕರಿಬಸವೇಗೌಡ ರವರಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿ ಕರಿಬಸವೇಗೌಡ ರವರಿಗೆ ಮಕ್ಕಳಿಲ್ಲದ ಕಾರಣ 1 ನೇ ಪ್ರತಿವಾದಿಯವರನ್ನು ದತ್ತು ಮಗನಾಗಿ ಸ್ವೀಕರಿಸಿದ್ದರು ಎಂದರೆ ಸರಿಯಲ್ಲ. ಹಾಗಾಗಿ 1 ನೇ ಪ್ರತಿವಾದಿಯವರು ಸದರಿ ಕರಿಬಸವೇಗೌಡ ರವರ ಯೋಗಕ್ಷೇಮವನ್ನು ಅವರ ಮರಣದವರೆಗು ನೋಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ.

ಸದರಿ ಕರಿಬಸವೇಗೌಡ ಮತ್ತು ಪುಟ್ಟಲಿಂಗಮ್ಮ ರವರ ದಾಂಪತ್ಯ ಜೀವನದಲ್ಲಿ ಜಗಳವಾಗಿ ಒಂದು ಅಸಲು ದಾವಾ ಸಂಖ್ಯೆ 11/1974 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಸಲು ದಾವಾ ಸಂಖ್ಯೆ 11/1974 ರಾಜಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮೃತ ಕರಿಬಸವೇಗೌಡ ಮತ್ತು 1 ಮತ್ತು 2 ನೇ ಪ್ರತಿವಾದಿಯವರು ಸೇರಿಕೊಂಡು ನೀಲಸೋಗೆ ಗ್ರಾಮದ ಸರ್ವೆ ನಂ. 184/3(ಎ) ಮತ್ತು 184/3(ಬಿ) ರ ಜಮೀನುಗಳನ್ನು ಕೆ. ಬಸವರಾಜು ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಈ ದಾವೆಯಲ್ಲಿ ಏನು ತಕರಾರನ್ನು ಸಲ್ಲಿಸಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ 1980 ರ ಕ್ರಯ ಪತ್ರದಲ್ಲಿ ಮೃತ ಕರಿಬಸವೇಗೌಡ ರವರು 1 ನೇ ಪ್ರತಿವಾದಿಯವರನ್ನು ಸಾಕು ಮಗ ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ.

ಅದೇ ರೀತಿ 1 ಮತ್ತು 2 ನೇ ಪ್ರತಿವಾದಿಯವರು ದಿನಾಂಕ 15.04.1982 ರಂದು ಒಂದು ಜಮೀನನ್ನು ಮಹದೇವಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 1 ರಿಂದ 4 ನೇ ಪ್ರತಿವಾದಿಯವರು ದಿನಾಂಕ 14.06.2000 ರಂದು ಒಂದು ಜಮೀನನ್ನು ಸುಂದ್ರಮ್ಮ ಬಿನ್ ಮಂಗಳಮ್ಮ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ

ಕ್ರಯ ಪತ್ರದಲ್ಲೂ ಸಹ 1 ನೇ ಪ್ರತಿವಾದಿಯವರನ್ನು ಕರಿಬಸವೇಗೌಡ ರವರ ದತ್ತು ಮಗ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 19.01.1980 ರಂದು ಮೃತ ಕರಿಬಸವೇಗೌಡ ಮತ್ತು 1 ಮತ್ತು 2 ನೇ ಪ್ರತಿವಾದಿಯವರು ಒಂದು ಖಾಲಿ ನಿವೇಶನವನ್ನು ವಾದಿಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಬಗ್ಗೆ ನನ್ನದು ಯಾವುದೇ ತಕರಾರು ಇರುವುದಿಲ್ಲ.

1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸೇರಿ ಸರ್ವೆ ನಂ. 126/5 ರ 27 ಗುಂಟೆ ಜಮೀನಿಗೆ ನಮ್ಮ ವಿರುದ್ಧ ಅಸಲು ದಾವಾ ಸಂಖ್ಯೆ 229/2019 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸರ್ವೆ ನಂ. 126/4 ಮತ್ತು ಸರ್ವೆ ನಂ. 126/5 ರ ಜಮೀನುಗಳು ಬೇರೆ ಬೇರೆ ಸರ್ವೆ ನಂಬರ್ ನ ಜಮೀನುಗಳು ಎಂದರೆ ಸರಿ. 5 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯ ಅಣ್ಣನ ಮಗ. ದಿನಾಂಕ 26.03.2012 ರಂದು ಪುಟ್ಟಮಾದಮ್ಮ, ಸಿದ್ದರಾಜು, ಜಯಲಕ್ಷ್ಮೀ ಮತ್ತು ನಟರಾಜು ರವರು ಸೇರಿ ಒಂದು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಂದಾಯಿತ ವಿಭಾಗ ಪತ್ರದ ಮೂಲಕ ಸರ್ವೆ ನಂ. 126/4 ರ 27 ಗುಂಟೆ ಜಮೀನು ಈ ದಾವೆಯ 5 ನೇ ಪ್ರತಿವಾದಿಯ ಹೆಸರಿಗೆ ಹೋಗಿದೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಮೂಲಕ ಬಂದಂತಹ ಸರ್ವೆ ನಂ. 126/4 ರ ಜಮೀನನ್ನು 5 ನೇ ಪ್ರತಿವಾದಿಯವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ದಿನಾಂಕ 16.04.2000 ರಂದು ದಾವಾ 1 ನೇ ಅನುಸೂಚಿ ಸ್ವತ್ತನ್ನು 1 ರಿಂದ 4 ನೇ ಪ್ರತಿವಾದಿಗಳು ಸುಂದ್ರಮ್ಮ ಬಿನ್ ಮಂಗಳಮ್ಮ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಮೇಲ್ಕಂಡ ವಿಭಾಗ ಪತ್ರ ಮತ್ತು ಕ್ರಯ ಪತ್ರಗಳು ಸರಿ ಇಲ್ಲ ಎಂದು ಕೋರಿ ನಾನು ಯಾವುದೇ ದಾವೆ ದಾಖಲು ಮಾಡಿರುವುದಿಲ್ಲ. 1 ನೇ ಪ್ರತಿವಾದಿಯವರು 4 ನೇ ಅನುಸೂಚಿ ಸ್ವತ್ತನ್ನು ಆತನ ಮಗಳಾದ ನಾಗರತ್ನಮ್ಮ ರವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಅಡ್ಡನಿಂಗೇಗೌಡ ಮತ್ತು ಬಸಮ್ಮ ರವರು ನನಗೆ ಗೊತ್ತಿರುತ್ತಾರೆ. ಸದರಿ ಅಡ್ಡನಿಂಗೇಗೌಡ ಮತ್ತು ಬಸ್ಸಮ್ಮ ರವರಿಗೆ ನಾಲ್ಕು ಜನ ಮಕ್ಕಳು ಅವರೆಂದರೆ ದೊಡ್ಡಪುಟ್ಟಲಿಂಗಮ್ಮ, ಮಾದಮ್ಮ, ಪುಟ್ಟಲಿಂಗಮ್ಮ, ರಾಚೇಗೌಡ. ನನ್ನ ತಾಯಿಯ ತಂದೆಯ ಹೆಸರು ಬಸವೇಗೌಡ. ನನ್ನ ತಾಯಿಯ ತಾಯಿಯ ಹೆಸರು ಮಾದಮ್ಮ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲದಿದ್ದರು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ